ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ದಿನಾಂಕ : 19 MAR 2021

ಕವಿಪ್ರನಿನಿ/ಬಿ9/14629/20-21

## ಸುತ್ತೋಲೆ

**ವಿಷಯ:-** ನಿಗಮದ ಕೇಂದ್ರ ಖರೀದಿ ಸಮಿತಿ ಮುಂದೆ ಸಲ್ಲಿಸುವ ಪ್ರಸ್ತಾವನೆಗಳಲ್ಲಿ ನಿಖರವಾದ/ ಕರಾರುವಕ್ಕಾದ ಮಾಹಿತಿ / ದಾಖಲೆಗಳನ್ನು ಸಲ್ಲಿಸುವ ಬಗ್ಗೆ ಹಾಗೂ ಖರೀದಿ ಸಮಿತಿಯ ನಿರ್ಣಯಗಳಂತೆ ಕ್ರಮಕೈಗೊಳ್ಳುವ ಮುನ್ನ, ಸದರಿ ನಿರ್ಣಯದಲ್ಲಿನ ಅನುಮೋದಿತ ಮಾಹಿತಿಗಳನ್ನು ಮತ್ತೊಮ್ಮೆ ಪರೀಕ್ಷಿಸಿಕೊಂಡು ನಂತರ ಕಾರ್ಯಗತಗೊಳಿಸುವ ಬಗ್ಗೆ.

<><><><><>

ನಿಗಮದ ಅಧಿಕಾರ ನಿಯೋಜನಾ ಕೈಪಿಡಿ-2018 ರನ್ವಯ, ಮುಖ್ಯ ಇಂಜಿನಿಯರುಗಳ ಅಧಿಕಾರ ವ್ಯಾಪ್ತಿಗೆ ಮೀರಿದ Tender / work slip / variation statement / extension of time/ liquidated damages ಇತ್ಯಾದಿಗಳ ಬಗ್ಗೆ ಕೇಂದ್ರ ಖರೀದಿ ಸಮಿತಿ (CPC) ಮುಂದೆ ಅನುಮೋದನೆ ಪಡೆಯಲು ಸಲ್ಲಿಸುವ ಪ್ರಸ್ತಾವನೆಗಳಲ್ಲಿ ನಿಖರವಾದ/ ಕರಾರುವಕ್ಕಾದ ಮಾಹಿತಿ/ ದಾಖಲೆಗಳನ್ನು ಸಲ್ಲಿಸುವುದು ಅವಶ್ಯಕವಾಗಿರುತ್ತದೆ. ಸದರಿ ಮಾಹಿತಿ/ದಾಖಲೆಗಳ ಆಧಾರದ ಮೇಲೆ ಕೇಂದ್ರ ಖರೀದಿ ಸಮಿತಿ ನಿರ್ಣಯಕೈಗೊಳ್ಳುತ್ತದೆ. ನಿಖರವಾದ/ಕರಾರುವಕ್ಕಾದ ಮಾಹಿತಿ/ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ನಿರ್ಣಯ ತೆಗೆದುಕೊಳ್ಳುವುದು ವಿಳಂಬವಾಗುವುದಲ್ಲದೆ ತಪ್ಪು ನಿರ್ಧಾರ ಕೈಗೊಳ್ಳುವ ಸಂಭವ ಸಹ ಇರುತ್ತದೆ. ಆದ ಕಾರಣ, ಕೇಂದ್ರ ಖರೀದಿ ಸಮಿತಿ ಮುಂದೆ ಸಲ್ಲಿಸುವ ಪ್ರಸ್ತಾವನೆಗಳನ್ನು ಅತಿ ಎಚ್ಚರಿಕೆಯಿಂದ ಪರಿಶೀಲಿಸಿಕೊಂಡು ನಿಖರವಾದ/ ಕರಾರುವಕ್ಕಾದ ಮಾಹಿತಿ/ ದಾಖಲೆಗಳೊಡನೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ.

ಮುಂದುವರೆದಂತೆ, ಕೇಂದ್ರ ಖರೀದಿ ಸಮಿತಿಯಿಂದ ಹೊರಬರುವ ನಿರ್ಣಯಗಳನ್ನು ಕಾರ್ಯಗತಗೊಳಿಸುವ ಮುನ್ನ, ಸದರಿ ನಿರ್ಣಯಗಳಲ್ಲಿನ ಗುತ್ತಿಗೆದಾರರ ಹೆಸರು / ಪರಿಮಾಣ /ದರ /ಮೊತ್ತ /ಶೇಕಡಾವಾರು ಸಂಖ್ಯೆ/ದಿನಗಳು ಇತ್ಯಾದಿಗಳಲ್ಲಿ, ಲಿಪಿಕ/ಗಣಿತದ ತಪ್ಪು/ಕಣ್ತಪ್ಪಿನಿಂದ ಉಂಟಾಗಬಹುದಾದ ದೋಷಗಳನ್ನು ಮತ್ತೊಮ್ಮೆ ಪರೀಕ್ಷಿಸಿಕೊಂಡು, ಕಂಪನಿ ಕಾರ್ಯದರ್ಶಿಯವರ ಶಾಖೆಯಿಂದ ಸರಿಪಡಿಸಿಕೊಂಡು, ನಂತರ ಕಾರ್ಯಗತಗೊಳಿಸಲು ಸೂಚಿಸಿದೆ.

(ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

19/3/2021
ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

SE(IT)

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.